Registered Number M. 1299. SATYAVADI ( Founded 1917 ) Every Evening

# ಸತ್ಯವಾದಿ

ಸೋಮವಾರದ ಸಂಚಿಕೆ ( ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು )

ಸಂಪುಟ 28 ಸಂಚಿಕೆ 295 ] ಸೋಮವಾರ 27–8–45 [ 6 ಪೈ

## ಈ ವಾರದ ಭವಿಷ್ಯ

( ಓಂ ಜ್ಯೋತಿಷ್ಯರಿಂದ )

ಮೇಷ — ವ್ಯಾಪಾರ, ಆರೋಗ್ಯ, ಉದ್ಯೋಗಗಳಲ್ಲಿ ಲಾಭವಿರುತ್ತದೆ. ಕೀರ್ತಿಯನ್ನು ಗಳಿಸುವಿರಿ.

ವೃಷಭ — ಆರೋಗ್ಯ ಸುಖವುಂಟು. ಮಾನಸಿಕ, ಆರ್ಥಿಕ, ವ್ಯವಹಾರಿಕ ಸ್ಥಿತಿಗಳು ಚಿಂತಾಜನಕಗಳಾಗಿವೆ.

ಮಿಥುನ — ಆರೋಗ್ಯವು ಚನ್ನಾಗಿರುವುದಿಲ್ಲ. ಕಾರಣ, ಉತ್ಸಾಹ ಕಡಿಮೆ ಮತ್ತು ವ್ಯವಹಾರದಲ್ಲಿ ಲಾಭವಿರುವುದಿಲ್ಲ.

ಕರ್ಕಾಟಕ — ಆರೋಗ್ಯ ಲಾಭವುಂಟು. ಉದ್ಯೋಗದಲ್ಲಿ ಕೀರ್ತಿಯನ್ನು ಗಳಿಸುವಿರಿ. ಅಪ್ತೇಷ್ಟರ ಭೇಟಿ ಸುಯೋಗವು ಕಾಣಬರುತ್ತದೆ.

ಸಿಂಹ — ಸರ್ವತೋಮುಖವಾಗಿ ಲಾಭವೂ, ಸೌಖ್ಯವೂ ಕೈಗೂಡುವುದು.

ಕನ್ಯಾ — ದೇಹಿಕ, ಮಾನಸಿಕ, ವ್ಯವಹಾರೇತ್ಯಾದಿ ಸ್ಥಿತಿಗಳು ಉತ್ತಮ.

ತುಲಾ — ನಿಮಗೆ ಸರ್ವಾನುಕೂಲ.

ವೃಶ್ಚಿಕ — ಇಂದ್ರಿಯ ನಿಗ್ರಹವನ್ನು ಮಾಡಲೆತ್ನಿಸಿ. ಕ್ಲೇಶ ನಿವಾರಣೆಯಾಗುವುದು.

ಧನಸ್ಸು — ಸಕಲದಲ್ಲೂ ಯಶ.

ಮಕರ — ಎಲ್ಲಾ ಬಗೆಯಲ್ಲೂ ಆನಂದ ಪ್ರಾಪ್ತಿ.

ಕುಂಭ — ಆರೋಗ್ಯಕ್ಕೆ ಧಕ್ಕೆ. ನಿಮಗೀವಾರ ಕಷ್ಟ ನಿಷ್ಠೂರ ಹೆಚ್ಚು.

ಮೀನ — ಸರ್ವತೋಪ್ರಮುಖವಾಗಿ ವಿಜಯ ಪ್ರಾಪ್ತಿ.

---

## ಟ್ರಸ್ಟ್ ಬೋರ್ಡ್ ಮಿಟಿಂಗ್

ಮೈಸೂರು ಆ 26— ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಸಾಧಾರಣ ಮಿಟಿಂಗು ಈ ತಿಂಗಳು 31 ನೇ ತಾ || ಶುಕ್ರವಾರ ಬೆಳಿಗ್ಗೆ ನಡೆಯುವುದು.

## ಸಾದರ ಸ್ವೀಕಾರ

"ಪ್ರಭಾತ" ಮಂಗಳೂರಿನ ಪ್ರಗತಿಪರ ವಾರಪತ್ರಿಕೆಯು 1945 ನೇ ವರ್ಷದ ವಿಶೇಷಾಂಕವು ನಮ್ಮ ಹಸ್ತಗತವಾಗಿದೆ ಚತುರ್ಥಾಂಕ 188 ಪುಟಗಳು : ಸುಂದರ ಮುದ್ರಣ ಮತ್ತು ಆದಕ್ಕೊಪ್ಪುವ ಹೊದಿಕೆಯಿಂದ ಕೂಡಿದೆ. ಬೆಲೆ ರೂ 1–0–0.

ಈ ಸಂಚಿಕೆಯಲ್ಲಿ ಸಂಪಾದಕರಾದ ಶಿಣ್ಯೈರವರೇ ಹೇಳಿರುವಂತೆ ಕಾಗದದ ನಿಯಂತ್ರಣದ ಆಜ್ಞೆಗೆ ಕಟ್ಟುಬಿದ್ದು ಈ ಸಲ 'ಆರ್ಟ್ ಪ್ಲೇಟ್' ಸೇರಿಸಲು ಆಗಲಿಲ್ಲವಾಗಿದೆ. ಇದು ಇಲ್ಲದಿದ್ದರೂ ಈಗಿನ ಕಾಲದಲ್ಲಿ ಇಂತಹ ಸುಂದರ ಸಂಚಿಕೆ ಹೊರಡಿಸಿದ್ದು ಸಾಹಸವೆ ಕಾರ್ಯವೇ ಸರಿ. ಇನ್ನೊಂದು ವೈಶಿಷ್ಟ್ಯವೇನೆಂದರೆ ಈ ಸಂಚಿಕೆಯನ್ನು ಪ್ರಕಾಶಕರು ತಮ್ಮನಾಡಿದ ಹಿರಿಯ ಗಣ್ಯವ್ಯಕ್ತಿಗಳೊಬ್ಬರಿಗೆ ಅರ್ಪಿಸಿದ್ದಾರೆ. ಈ ತರಹ ವಿಶೇಷಾಂಕವನ್ನು ಒಬ್ಬರಿಗರ್ಪಿಸುವುದು ತೀರ ಹೊಸದು. ಮತ್ತು ವಾಙ್ಮಯವೃಂದಕ್ಕೂ ಅವರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಕನ್ನಡನಾಡಿನಲ್ಲಿ ವಿಶೇಷಾಂಕ ಹೊರಡಿಸುವುದರಲ್ಲಿ ಹೆಸರುಪಡೆದಂಥಾ ವಾರಪತ್ರಿಕೆಯೆಂದರೆ 'ಪ್ರಜಾಮತ'. ಅದೇ ತರಹ ಅದೇ ದರ್ಜದಲ್ಲಿ 'ಪ್ರಭಾತ' ವಾರಪತ್ರಿಕೆಯೂ ತನ್ನ ಕೈನೀಡಿದೆ— ಒಳ್ಳೇ ವಿಚಾರಪೂರಿತ ಲೇಖನಗಳು. ಹರಟೆಗಳು, ಅಣಕುವಾಡಗಳು, ಚಲನಚಿತ್ರಕ್ಕೆ ಸಂಬಂಧಿಸಿದ ಲೇಖನಗಳೂ ಹೇರಳವಾಗಿವೆ. ಇಂತಹ ಹೆಮ್ಮೆಯ ಸಂಚಿಕೆಯನ್ನು ಕನ್ನಡನಾಡಿಗೆ ಇಂತಹ ದುರ್ದಿನಗಳಲ್ಲಿ ಕೊಡಲು ಸಾಹಸಪಟ್ಟ ಶ್ರೀ ಶಿಣ್ಯೈರನಿಗೆ ನಮ್ಮ ಧನ್ಯವಾದಗಳು. ಇದೇ ರೀತಿ 'ಪ್ರಭಾತ' ಇನ್ನೂ ಹೆಚ್ಚಿನ ಸೇವೆ ಸಲ್ಲಿಸಿ ಈಗತಾನೇ ಕೊನೆಗೊಂಡಿರುವ ಸಮರದಿಂದ ಉಬ್ಬಿ ತನ್ನ ಕಿರಣಗಳನ್ನು ಹೆಚ್ಚಾಗಿ ಪ್ರಸರಿಸಲಿ ಎಂಬುದೇ ನಮ್ಮ ಬಯಕೆ. (ಎಕ್ಸ್. ವಿ. ಕೆ)

# ಜಪಾನಿಗರ ಷಾ ಸೈನ್ಯವೇ

ಬ್ರಿಟಿಷರು ಲೆಜಾನಾಸ ಸಿರಿಯಾ ದೇಶಗಳಿಂದ ತಮ್ಮ ಸೈನ್ಯವನ್ನು ವಾಪಸ್ ಕರೆಸಿಕೊಂಡಕೂಡಲೇ ಫ್ರಾನ್ಸು ತನ್ನ ಸೈನ್ಯವನ್ನು ವಾಪಸ್ ಕರೆಸಿಕೊಳ್ಳುವುದೆಂದು ಡಿಗಾಲರು ಸಾರಿದರು.

ಂ ಂ

ಟೋರಿಗಳು ಮಾಡಿದ ಇಂಗ್ಲೆಂಡಿನ ಎಲ್ಲ ವಿಧದ ಕೊಳಿ ಮತ್ತು ಕಲ್ಮಷಗಳನ್ನು ತೆಗೆದುಹಾಕುವ ಜವಾಬ್ದಾರಿಯು ಕೂಲಿಗಾರರ ಪಾಟಿಗೆ ಬಂದಂತಾಯಿತೆಂದು ಲೇಬರ ವಿಜಯದ ಬಗ್ಗೆ ಬರ್ನಾರ್ಡ್ ಷಾರವರು ಹೇಳಿದರು.

ಂ ಂ

ಶ್ರೀ ಸುಭಾಷಚಂದ್ರಬೋಸರ ಮರಣದ ಬಗ್ಗೆ ಭಾರತದ ಅನೇಕ ಕಡೆಗಳಲ್ಲಿ ಮುಖಂಡರು ಸಂತಾಪ ಸೂಚಿಸಿದರು. ಸಂತಾಪ ಸಭೆಗಳೂ ನಡೆದವು.

ಂ ಂ

ಬರೋಡಾ ಗಾಯಕವಾಡರು ಇಂಗ್ಲೆಂಡಿನಲ್ಲಿಯು ಸಫೋಕ್ಸ್‌ನಲ್ಲಿಯ ವಾಲ್ಬ್ರಕ್ ಹೇತ್ ಎಂಬ 87 ಎಕರೆ ಭೂಮಿ ಬ್ರಿಟಿಷ್ ಎಸ್ಟೇಟನ್ನು ಕೊಂಡುಕೊಂಡಿರುವರು.

## ಮೀನು ತಿನ್ನಿರಿ

ಮದ್ರಾಸಿನ ಡೈರೆಕ್ಟರ್ ಆಫ್ ಫಿಷರೀಸ್ ಹೀಗೆ ಪ್ರಕಟಣೆ ಹೊರಡಿಸಿದ್ದಾರೆ:—ಮೀನುಗಳ ಕೃಷಿಯಲ್ಲಿ ಪ್ರಜೆಗಳು ಇಷ್ಟು ಆಲಸ್ಯದಿಂದಿರುವುದು ವಿಷಾದಕರವು. ಅತೀ ಬಡವರಾದ ಜನಗಳು ಹಾಲು, ತುಪ್ಪ, ಮೊಸರು, ಕೆನೆ ಮೊದಲಾದವನ್ನು ಹೆಚ್ಚು ಬೆಲೆ ಕೊಟ್ಟು ತಿನ್ನಲಾರರು. ಅದಕ್ಕೆ ಪ್ರತಿಯಾಗಿ ಮೀನುಗಳನ್ನು ಪ್ರತಿ ಮನುಷ್ಯನೂ ದಿನವೊಂದಕ್ಕೆ ಹತ್ತು ತೊಲಗಳಷ್ಟು ತಿಂದಲ್ಲಿ ಅವಶ್ಯವಾದ ಪುಷ್ಟಿಯನ್ನು ಕೊಡುವ ಆಹಾರವನ್ನು ತಿಂದಂತಾಗುವುದು.

ಜಪಾನಿಗೆ ರಷ್ಯಾ ಸೈನಿಕರು ವಿಮಾನದಲ್ಲಿ ಕಳುಹಿಸಲಾಗುವುದೆಂದು ಹೊರಟಿರುವ ಸುದ್ದಿಯು ಜಪಾನೀಯರ ಮನಸ್ಸಿನಲ್ಲಿ ಕಳವಳವನ್ನುಂಟುಮಾಡಿದೆಯೆಂದೂ, ಜಪಾನರು ಒಪ್ಪಂದದ ಎಲ್ಲಾ ಷರತ್ತುಗಳನ್ನು ಪಾಲಿಸಲು ಪ್ರಯತ್ನಿಸುತ್ತಿರುವ ಜಪಾನೀಯರಿಗೆ 'ಇದು ಮನೋರೋಗ ತಂದೊಡ್ಡಿರುವುದೆಂದೂ ಹೇಳಲಾಗಿದೆ.

## ರಾಜಧಾನಿಯ ಪೌರಸಭೆ

ವೈಸೂರು, ಆ 25

ಶ್ರೀ ಆರ್. ರಾಮಚಂದ್ರರಾವ್ ಬಾಂಭೋರೆರವರ ಅಧ್ಯಕ್ಷತೆಯಲ್ಲಿ ಈ ಮೆಧ್ಯಾನ್ನ ಪೌರಸಭಾಧಿವೇಶನ ಸೇರಿದ್ದಿತು.

ಕಾಂಗ್ರೆಸ್ ಪಾರ್ಟಿಯವರು ಸುಭಾಷ್‌ಚಂದ್ರ ಬೋಸರು ನಿಧನವಾದ ಬಗ್ಗೆ ಅನುತಾಪ ಸೂಚಿಸುವ ನಿರ್ಣಯವೊತಿದನ್ನು ಮಂಡಿಸಲು ಪ್ರಯತ್ನಿಸಿದರು.

ಅಧ್ಯಕ್ಷರು ನಿರ್ಣಯವನ್ನು ಒಪ್ಪದೆ, 'ಶ್ರೀ ಸುಭಾಷ್ ಚಂದ್ರರ ನಿಧನವಾರ್ತೆಯು ಸಂಶಯಾಸ್ಪದವಾಗಿದೆ. ಅವರ ಈಚಿನ ನಡವಳಿಕೆ ಭಾರತಕ್ಕೆ ಅಹಿತವಾಗಿದೆ ಮತ್ತು ಅವರನ್ನು ಭಾರತದ ವೈರಿಯನ್ನಾಗಿ ಪರಿಗಣಿಸಲಾಗಿದೆ. ಈ ಸಭೆಯು ರಾಜಕೀಯ ತತ್ವದ ಮೇಲೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಮಂಜಸವಾಗಿಲ್ಲ' ಎಂಬುದಾಗಿ ತಿಳಿಸಿದರು.

ಯಾವ ಕಾರಣವನ್ನೂ ಸೂಚಿಸದೆ ಹತ್ತು ನಿಮಿಷ ಸಭಾ ವಿಳಂಬವಾಗಬೇಕೆಂದು, ಕಾಂಗ್ರೆಸ್ ಪಕ್ಷದವರಿಂದ ನಿರ್ಣಯಿಸಲ್ಪಟ್ಟಿದ್ದು ಒಪ್ಪಿಗೆಯನ್ನು ಪಡೆಯಿತು.

## ರೂಸ್ವೆಲ್ಟ್ ಪ್ರತಿಮೆಗೆ ಸ್ಥಳವಿಲ್ಲ

ಪ್ರೆಸಿಡೆಂಟ್ ರೂಸ್ವೆಲ್ಟರ ಪ್ರತಿಮೆ ಎಲ್ಲಿ ಇಡಬೇಕೆಂಬ ಚರ್ಚೆಯಾಯಿತು. ಸದಸ್ಯರುಗಳು ನಾನಾ ಭಾಗಗಳಲ್ಲಿ ಇಡಲು ಸಲಹೆ ಕೊಟ್ಟರು. ಆ ಸಲಹೆಗ ಳೇನೂ ಪ್ರಯೋಜನವಾಗಲಿಲ್ಲ.

ವಾಷಿಂಗ್‌ಟನ್ ಪ್ರತಿಮೆಯ ಪಕ್ಕದ ಲ್ಲಿ ರೂಸ್ವೆಲ್ಟರ ಪ್ರತಿಮೆಯನ್ನಿಡಿರೆಂದು ಸದಸ್ಯರೊಬ್ಬರು ಸೂಚಿಸಿದರು.

ಸೂಚನೆ ವ್ಯರ್ಥವಾಯಿತು. ವಾ ಷಿಂಗ್ಟನ್ ಸುಳ್ಳನ್ನು ಎಂದಿಗೂ ಹೇಳಿದ ವನಲ್ಲ. ಆದುದರಿಂದ ಅವನ ಪಕ್ಕದ ಲ್ಲಿ ರೂಸ್ವೆಲ್ಟ್ ಪ್ರತಿಮೆ ಇಡಕೂಡದೆಂ ದು ತೀರ್ಮಾನಿಸಿದರು.

ಅಬ್ರಹಾಂ ಲಿಂಕನ್ ಪಕ್ಕದಲ್ಲಿ ರೂ ಸ್ವೆಲ್ಟ್ ಪ್ರತಿಮೆ ಸ್ಥಾಪಿಸಿರೆಂದು ಮ ತ್ತೊಬ್ಬ ಸದಸ್ಯರು ಸೂಚಿಸಿದರು.

ಲಿಂಕನ್ ಮಹಾ ಸತ್ಯಸಂಧನು. ಆ ತನ ಪಕ್ಕದಲ್ಲಿ ರೂಸ್ವೆಲ್ಟ್ ಪ್ರತಿಮೆ ಬೇ ಡವೆಂದು ಸದಸ್ಯರೆಲ್ಲರೂ ಒಪ್ಪಿದರು.

ರೂಸ್ವೆಲ್ಟ್ ಪ್ರತಿಮೆಯನ್ನು ಕೊಲಂಬ ಸ್ ಪ್ರತಿಮೆಯ ಪಕ್ಕದಲ್ಲಿಡಬೇಕೆಂದು ಸದಸ್ಯರೊಬ್ಬರ ಸೂಚನೆಗೆ ಸಭೆಯೇ ಎ ದುರು ಬಿದ್ದಿತು. ' ಕೊಲಂಬಸ' ಪ್ರ ಯಾಣದ ವಿಷಯದಲ್ಲಿ, ಅವನಿಗೇ ನಂ ಬಿಕೆ ಇರಲಿಲ್ಲ ಅವನು ಕಡು ಒಡನ ಸಾಲದಲ್ಲಿಯೇ ಅವನು ಮುಳುಗೆದ್ದಿದ್ದ ನು. ಆದುದರಿಂದ ಅವನ ಪಕ್ಕದಲ್ಲಿ ಕೂಡದು '-ಎಂದರು.

o o

## ಬರ್ಮಾದಲ್ಲಿ ಕೊನೆಯವರೆಗೂ ಜಪಾನರ ಪ್ರತಿಭಟನೆ

ರಂಗೂನ್— ಸಿತ್ತಾಂಗ್ ಪ್ರಾಂತ್ಯ ದಲ್ಲಿ ಕೈಸೆರೆ ಸಿಕ್ಕಿದ ಜಪಾನಿಗಳ ಪೈಕಿ ಕೆಲವರು ಮಾತ್ರ ತಾವಾಗಿ ಶರಣಾಗತ ರಾದರು. ಪೆಗು ಯೋಮಾ ಮತ್ತು ಸಿತ್ತಾಂಗ್ ಕಣಿವೆಗಳಲ್ಲಿ ಮೇ 28 ರಿಂ ದ ಆಗಸ್ಟ್ 13 ರವರಿಗೆ 20222 ಶತ್ರು ಗಳಿಗೆ ಸಾವು ನೋವುಗಳಾದವು: 1344 ಮಂದಿ ಕೈ ಸೆರೆ ಸಿಕ್ಕಿದರು. ಅಂತಿಮ ವಾ ಕದನದಲ್ಲಿ ಸೆರೆ ಸಿಕ್ಕಿದ 280 ಖೈದಿ ಗಳ ಪೈಕಿ 20 ಮಂದಿ ಮಾತ್ರ ತಾವಾ ಗಿ ಶರಣಾದರು. 60 ಮಂದಿ ತಮ್ಮಲ್ಲಿದ್ದ ಕಾಗದ ಪತ್ರಗಳನ್ನು ಮಿತ್ರರ ವಶಕ್ಕೊ ಪ್ಪಿಸಿದರು.

ಅಟಾಮಿಕ್ ಬಾಂಬ್ ಹಾವಳಿಯಿಂ ದ ಸುಮಾರು ೫ ಲಕ್ಷದವರೆವಿಗೆ ಸಾವು ನೋವುಗಳಂಟಾಗಿವೆ.

## ತಿಲಕರೂ, ವಿವೇಕಾನಂದರು

1891-2 ರಲ್ಲಿ ವಿವೇಕಾನಂದರು ಭಾ ರತದಲ್ಲಿ ಸಂಚಾರ ಮಾಡುತ್ತಿದ್ದಾಗ ಅ ವರಿಗೆ ಒಂದು ನಿರ್ಧಾರವಾದ ಹೆಸರಿರಲಿಲ್ಲ. ಯಾರಿಗೂ ತಿಳಿಯ ಬಾರದಂತೆ ಅವರು ಸಂ ಚಾರ ಮಾಡುತ್ತಿದ್ದರು. ಆತನು ಇಂ ಥವನೆಂದು ಯಾರೂ ಪತ್ತೆ ಹಚ್ಚಲಾಗು ತ್ತಿರಲಿಲ್ಲ. ೞಕ್ಟೋಬರು 1892 ರಲ್ಲಿ ಪುಣೆಗೆ ಬಂದಾಗ ತಿಲಕರು ಅವರನ್ನೊಬ್ಬ ಸಾಮಾನ್ಯ ಸನ್ಯಾಸಿಯೆಂದು ಭಾವಿಸಿ ದ್ದರು. ಅವರ ವಿಷಯದಲ್ಲಿ ಹೆಚ್ಚು ಗ ಮನ ಕೊಡಲಿಲ್ಲ. ಆದರೆ ಅವರೊಂದಿ ಗೆ ಸಂಭಾಷಣೆ ಮಾಡಿದಾಗ ಆತನು ಜ್ಞಾನಿಯೆಂದು ತಿಳಿದುಬಂದು 10 ದಿವಸ ಗಳವರೆಗೆ ತಮ್ಮ ಮನೆಯಲ್ಲೇ ಇಟ್ಟು ಕೊಂಡಿದ್ದರು. ಆದರೂ ತನ್ನ ನಿಜವಾ ದ ಹೆಸರನ್ನು ತಿಲಕರಿಗೆ ತಿಳಿಸಿರಲಿಲ್ಲ. ಆಮ್ಲೇರಿಕ ಪತ್ರಿಕೆಗಳಲ್ಲಿ ಅವರ ಪ್ರತಿಭೆ ಯನ್ನು ಕುರಿತು ಲೇಖನಗಳು ಬಂದಾಗ ತನ್ನ ಮನೆಯಲ್ಲಿದ್ದು ಕೊಂಡಿದ್ದ ಸ ನ್ಯಾಸಿ ಯಾರೆಂದು ತಿಳಿದುಬಂತು.

## ನೂಲುವುದರಿಂದ ಸ್ವಾತಂತ್ರ್ಯ

' ನೂಲಬೇಕು. ನೂಲಿನ ಮೇಲೆ ಹೊಂದಿಕೊಂಡಿದೆ ಸ್ವರಾಜ್ಯ. ಭಾರತೀ ಯರೆಲ್ಲರೂ ನೂಲುವ ಕಾರ್ಯಕ್ರಮ ಕೈಗೊಂಡು ನನ್ನ ಲ್ಲಿಗೆ ಬಾದರೆ ನಾನು ಅ ವರಿಗೆ ಸ್ವರಾಜ್ಯಕೊಡುವೆ. ಭಾರತದ ಲ್ಲಿ ೪೦ ಕೋಟಿ ಪ್ರಜೆಗಳಿದ್ದಾರೆ. ಅ ವರಲ್ಲಿ ಚಿಕ್ಕ ಮಕ್ಕಳನ್ನು ಬಿಟ್ಟು ಇತರ ರೆಲ್ಲರೂ ನೂಲುವ ಕಾರ್ಯಕ್ರಮ ಕೈ ಗೊಂಡರೆ ಅದೊಂದು ಮಹತ್ವದ ಸಾಧ ನೆಯೆನಿಸುವುದು. ಆದುದರಿಂದಲೇ ನಾನು ನೂಲಬೇಕೆಂದು ಎಲ್ಲರನ್ನು ಒ ತ್ತಾಸೆ ಪಡಿಸುತ್ತೇನೆ. ನೂಲುವುದೆಂ ದರೆ ಅಲ್ಪ ಕಾರ್ಯವಲ್ಲ. ಸ್ವಾತಂತ್ರ್ಯ ಸಂಗ್ರಾಮಕ್ಕೆ ನನ್ನ ಸಂದೇಶವಿಷ್ಟೆ. ನಾನು ವಿನೋದ ಮಾಡುವೆನೆಂದು ಎಣಿ ಸಬೇಡಿ. ನೂಲುವುದಲ್ಲಿ ಸಂಪೂರ್ಣ ಶಕ್ತಿ ಯೊಂದು ಅಡಕವಾಗಿದೆ '— ಹೀಗೆಂದು ಗಾಂಧೀಜೀಯವರು ಅಖಿಲ ಭಾರತ ಚ ರಖಾ ಸಂಘಕ್ಕೆ ಸ್ವಾತಂತ್ರ್ಯ ಸಪ್ತಾ ಹದ ಸಂದೇಶ ಕಳಿಸಿರುವರು.

ಫೀ| ಮಾ | ಮಾಂಟ್ಗೋಮರಿ ಆಂಟವರ್ಪ್ ಸ್ವಾತಂತ್ರ್ಯ ಘೋಷಣೆಯನ್ನು ತೆಗೆದುಕೊಳ್ಳುತ್ತಿರುವುದು

ಅಣು ಬಾಂಬಿನ ತಯಾರಿಗೆ ಅಮೇ ರಿಕಾ ಸರಕಾರವು ಹಣ್ಣು ಲಕ್ಷ ಪೌಂಡು ಬಿಳಿ ಕೊಟ್ಟಿದೆ.

o o

ಭಾರತದಲ್ಲಿ ರೇಷನಿಂಗ್ 1946 ರ ಪ್ರಾರಂಭದಲ್ಲಿ ತೆಗೆಯಲ್ಪಟ್ಟು, 1947 ರ ಕಡೆಯೊಳಗೆ ಎಲ್ಲ ರೆಡೆಗಳಲ್ಲೂ ಹೋಗವುದೆಂದೂ ಡೆಲ್ಲೀ ವಾರ್ತೆ.

ಲೆವಿಸ್ ಆ 20— ಡಿಲಾವೇರಿನ ಭಾರಿ ಯುದ್ಧ ಸಾಮಗ್ರಿ ತಯಾರಿಸು ತ್ತಿದ್ದ ಮಿಳ್-ಡರ್ಫ್ ಕಂಪೆನಿಯವರು ಯುದ್ಧ ಸಾಮಗ್ರಿ, ತಯಾರಿಸುವುದನ್ನು ನಿಲ್ಲಿಸಿ ಮದ್ದು ಗುಂಡು ತಯಾರಿಸು ವುದರ ಒದಲು. ವಕ್ಕಳ ವಿನೋದದ ಬೊಂಬೆಗಳನ್ನು ತಯಾರಿಸಲುಪಕ್ರಮಿಸಿದೆ

## ಸಿನಿಮಾ ದ್ವೇಷಿ ಲೀಗ್

ಸಿನಿಮಾ ಪ್ರೇಮಿಗಳ ಸಂಘಗಳು ಹಲವು ಕಡೆಗಳಲ್ಲಿ ತಲೆಯೆತ್ತಿದ ಸುದ್ದಿ ಯನ್ನು ನಾವು ಈ ಮೊದಲು ಹಲವು ಬಾರಿ ಕೇಳಿದ್ದೇವೆ. ಆದರೆ ಸಿನಿಮಾ ವಿರೋಧಿಗಳ ಸಂಘವೊಂದು ರಚನೆಯಾ ಗಿದೆಯೆಂದು ಇದೀಗ ಮೊದಲು ಬಾರಿ ಕೇಳುವುದಾಗಿದೆ. ಬಾನ್ನು ಎಂಬಲ್ಲಿ ಖಾಲ್ಸಾ ಹೈ ಸ್ಕೂಲಿನ ವಿದ್ಯಾರ್ಥಿಗಳು ಅಂತಹ ಸಂಘವೊಂದನ್ನು ಏರ್ಪಡಿಸಿ ದ್ದಾರೆ. ಸಿನಿಮಾಗಳು ವಿದ್ಯಾರ್ಥಿಗಳ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾ ಡುತ್ತವೆ. ಆದುದರಿಂದ ಅವುಗಳನ್ನು ಬಹಿಷ್ಕರಿಸ ಬೇಕು ಎಂಬುದು ಹೊಸ ಸಂಘದ ಪ್ರಚಾರ.

## ಪ್ರತಿಭಟನೆ

ಇಂಗ್ಲೆಂಡಿನ ಸೆಂಟ್ ಅಲ್ಬಾನ್ಸಿನ ಡೀನರಾದ ರೆವರೆಂಡ್ ಸಿ. ಸಿ. ಥಿಕ್ಕೆನ್ಸೆ ತಮ್ಮ ಚರ್ಚಿನಲ್ಲಿ ಜಪಾನಿನ ಮೇಲಿನ ವಿಜಯಕ್ಕಾಗಿ ಪ್ರಾರ್ಥನೆ ನಡೆಸಲು ಒಪ್ಪಲಿಲ್ಲ. ಅಣು ಬಾಂಬ್ ಉಪ ಯೋಗಿಸಿದ್ದಕ್ಕಾಗಿ ಅವರ ನಿಷೇಧವಿದೆ. ಅನ್ಯಾಯವಾಗಿ ಶಕ್ತಿಯನ್ನು ಪ್ರಯೋಗಿಸಿ ಪಡೆದ ವಿಜಯ ಲಾಭಕ್ಕಾಗಿ ನಾನು ದೇವರಿಗೆ ಪ್ರಾಮಾಣೀಕವಾಗಿ ವಂದನೆ ಗಳನ್ನರ್ಪಿಸಲಾರೆ ಎಂದಿರುವರು.

## ವೃತ್ತಾಂತ ಸಂಗ್ರಹ

ಮುಂದಿನ ಮಾಹೆ ೧ ರಿಂದ ಫಿಲಿಪೈ ನ್ಸಿನಲ್ಲಿ ಸಿವಿಲ್ ಆಡಳಿತ ನಡೆಯುವುದು.

ವಿಮಾನ ಅನಾಹುತವೊಂದರಲ್ಲಿ ಸು ಭಾಷ್ ಬೋಸರು ಗಾಯಗೊಂಡು ಆ ಸ್ಪತ್ರೆಯಲ್ಲಿ ಸತ್ತರೆಂದು ಜಪಾರ್ ನ್ಯೂ ಸ್ ಏಜನ್ಸಿ ವರದಿಮಾಡಿದೆ.

ಸುಣ್ಣಕಲ್ಲು ಅಭಾವದಿಂದ ಭದ್ರಾವ ತಿ ಪೇಪರ್ ಕಾರ್ಖಾನೆ ತಾತ್ಕಾಲಿಕವಾಗಿ ಬಂದಾಗಿದೆ.

ಸುಭಾಷ್ ಬೋಸರ ಮರಣ ವಾರ್ತೆ ಯಲ್ಲಿ ಗಾಂಧೀಜೀ ಮತ್ತು ಪಟೇಲರಿಗೆ ನಂಬುಗೆಯಿಲ್ಲವಂತೆ.

ಸುಪ್ರಸಿದ್ಧ ಸಿನಿಮಾ ತಾರೆ ದೇವಿಕಾ ರಾಣಿಯು ಪೋಲೀಷ್ ಕಲಾವಿದ ಸ್ಪೆಂ ಟೋ ಸ್ಲವ್ ರೋರಕ್‌ರೊಡನೆ ಫುನ್ಹ್ ವಾಹವಾದಳು. ವಿಹಾರಾರ್ಥವಾಗಿ ಹಿ ಮಾಲಯಕ್ಕೆ ಹೋಗಲಿರುವರು.

ಪೇಲಿಸ್ತಾನಿನ ಅರಬ್ಬಿ ಮುಸ್ಲಿಂರಿಗೆ ಭಾರತ ಮುಸ್ಲಿಂರ ಬೆಂಬಲವಿದೆಯೆಂದು ಜಿನ್ನಾ ಹೇಳಿದ್ದಾರೆ.

## ಲಂಚದ ಹಾವಳಿ ತಪ್ಪಿಸಲು ಉಪಾಯಗಳು ?

ಗಣಿಗಳಲ್ಲಿ, ಮಿಲ್ಲುಗಳಲ್ಲಿ ಕೆಲಸಮಾಡುವವರನ್ನು ಹೊರಕ್ಕೆ ಬಿಡುವಾಗ ಶೋಧನೆಮಾಡಿ ಬಿಡುವಂತೆ, ಆಫೀಸು, ಕೋರ್ಟುಕಛೇರಿ ಮೊದಲಾದ ಸ್ಥಳಗಳಲ್ಲಿ ಕೆಲಸ ಮಾಡುವವರು, ಅವರು ಅಧಿಕಾರಿಗಳಾಗಲೀ ನೌಕರರಾಗಲೀ ಆಫೀಸಿನ ಹೊಸಲನ್ನು ದಾಟುತ್ತಲೂ ಶೋಧನೆಮಾಡಲ್ಪಟ್ಟು ಅವರಲ್ಲಿ ಹಣ ದೊರೆತಲ್ಲಿ ಆ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುವಂತಾಗಬೇಕು. ಈ ಶೋಧನಾ ಕಾರ್ಯಕ್ಕೆ ನಿಯಮಿತರಾದವರು, ಅಲ್ಪ ಸಂಬಳದವರಾದರೂ ಇತರ ಸರಕಾರಿ ಉದ್ಯೋಗಿಗಳ ಹಾಗೂ ಆಫೀಸರರ ತಾಬೇದಾರರಂತೆ ಪರಿಗಣಿಸಕೂಡದು.

ಆಫೀಸಿಗೆ ಹೋಗುವಾಗ ಯಾವ ಗುಮಾಸ್ತರೂ ಆಫೀಸರೂ ಹಣವನ್ನು ಜೇಬಿನಲ್ಲಿಟ್ಟುಕೊಂಡು ಹೋಗಕೂಡದೆಂಬ ನಿಯಮವಿರಬಕ್ಕದ್ದು. ಮಧ್ಯಾಹ್ನ ಟಿಫಿನ್ನಿಗಾಗಿ, ರೈಲು, ಟ್ರಾಂ, ಬಸ್ಸುಗಳ ಖರ್ಚಿಗಾಗಿ ಹಣ ಇಟ್ಟುಕೊಳ್ಳಬೇಕಾಗಿದ್ದಲ್ಲಿ ಶೋಧಕ ಸಂಸ್ಥೆಯವರಲ್ಲಿ ಆಫೀಸನ್ನು ಪ್ರವೇಶಿಸುವುದಕ್ಕೆ ಮುಂಚೆ ಆ ಹಣವನ್ನು ಪಾವತಿಮಾಡಿ ರಶೀತಿ ಪಡೆದು ಮನೆಗೆ ಹೋಗುವಾಗ ತೆಗೆದು ಕೊಂಡು ಹೋಗುವಂತಾಗಬೇಕು.

ಗುಡ್ಸ್‌ಷೆಡ್ಡು, ಬುಕ್ಕಿಂಗ್ ಆಫೀಸು, ಪಾರ್ಸಲ್ ಆಫೀಸು, ಸಬ್ ರೆಜಿಸ್ಟ್ರಾರ್ ಆಫೀಸು, ಮೊದಲಾದುವುಗಳಲ್ಲಿ ಕೆಲಸ ಮಾಡುವವರ ಶೋಧನೆಯು ಅವರು ಕೆಲಸಮಾಡುತ್ತಿರುವಾಗ ಕೂಡ ಆಗಿಂದಾಗ್ಗೆ ಆಗುತ್ತಿರಬಕ್ಕದ್ದು.

ಪ್ರತಿಯೊಬ್ಬ ಸಂಸಾರಿಯು ಆದಾಯ, ವ್ಯಯಗಳನ್ನೂ, ಅವನು ಆಸ್ತಿವಂತನಾಗಿದ್ದಲ್ಲಿ, ಅಷ್ಟು ಆಸ್ತಿಯು ಕೂಡಲು ಕಾರಣಗಳೇನಿರಬಹುದೆಂದು ವಿಚಾರಿಸಿ ಲಂಚಭ್ರಷ್ಟತ್ವಗಳೂ ಕಾರಣಗಳಾಗಿ ಕಂಡುಬಂದಲ್ಲಿ ಆ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತಾಗಬೇಕು.

ಆಫೀಸರುಗಳು ಯಾವ ಸರ್ಕಾರ್ಯವ್ಯವಹಾರವನ್ನೂ ತಾವು ಮನೆಯಲ್ಲಿರುವಾಗ ಮಾಡಕೂಡದೆಂಬ ನಿಬಂಧನೆ ಇರಬಕ್ಕದ್ದು.

ಸರ್ಕ್ಯೂಟು ಹೋಗುವ ಆಫೀಸರುಗಳು ತಾವು ಪ್ರಯಾಣವನ್ನು ಆರಂಭಿಸುವಾಗ ಎಷ್ಟು ಹಣವನ್ನು ತಮ್ಮೊಂದಿಗೆ ಇಟ್ಟುಕೊಂಡಿರುವುದು, ಪ್ರಯಾಣಾಂತ್ಯದಲ್ಲಿ ಎಷ್ಟು ಮಿಕ್ಕಿರುವುದೂ ಶೋಧನೆಯಾಗುತ್ತಿರಬಕ್ಕದ್ದು. ಇವರಿಂದ ಸರ್ಕಾರದವರು ಕೊಡುವ ಪ್ರಯಾಣ ಖರ್ಚು ಎಷ್ಟುಮಟ್ಟಿಗೆ ಉಪಯೋಗಿಸಲ್ಪಡುವುದೆಂದು ತಿಳಿದುಬರುವುದು.

ನಿರ್ದಾಕ್ಷಿಣ್ಯವಾಗಿ ಕೆಲಸಮಾಡುವವರಿಲ್ಲದೆ ಲಂಚಭ್ರಷ್ಟತ್ವಗಳನ್ನು ಜೀರಿಸೊಂದಿಗೆ ಕಿತ್ತೊಗೆಯುವುದು ಅಸಂಭವವು.

ಆಫೀಸರುಗಳು ಲಂಚವನ್ನು ತೆಗೆದುಕೊಂಡರೆಂಬ ಅಪವಾದನೆ ಇಲ್ಲದಿರುವುದಕ್ಕಾಗಿ, ಆಫೀಸರುಗಳ ಹೆಂಗಸರಿಗೆ ಮಕ್ಕಳಿಗೆ ಉಡಿಗೆ ಆಭರಣ ಮೊದಲಾದ ರೂಪಗಳಲ್ಲಿ ಒಂದುಬಳಿಗದವರಲ್ಲದವರು ಕೊಡುವುದು ತಪ್ಪತಕ್ಕದ್ದು. (ಓಂ)

### ಅ ಣು ಬಾ ಂ ಬು ಗ ಳು

ಇವುಗಳಲ್ಲಿ ಸೇರಿರುವ ಮುಖ್ಯವಾದ ಪದಾರ್ಥವು ಯುರೇನಿಯಂ. ಈ ಯುರೇನಿಯಂ ಖನಿಜದ ಈಗ ಪೌಂಡಿಗೆ ಹತ್ತುಷಿಲಿಂಗುಗಳು ಅಂದರೆ ಸುಮಾರು 5 ರೂ. ಗಳು. ಈ ಯುರೇನಿಯಂನಲ್ಲಿಂದು ಸಣ್ಣ ಅಣುವು ವಿಮಾನವನ್ನು ಪ್ರಪಂಚದ ಸುತ್ತಲೂ ಹಾರಿಸುವ ಶಕ್ತಿಯನ್ನು ಹೊಂದಿರುತ್ತದೆ. ಒಂದು ಪೌಂಡು ಯುರೇನಿಯಂನಲ್ಲಿ ಎಷ್ಟು ಶಕ್ತಿ ಇರುವದೆಂದರೆ 5 ಮಿಲಿಯ ಪೌಂಡು ಕಲ್ಲಿದ್ದಲ್ಲಿನ ಅಥವಾ 3 ಮಿಲಿಯ ಪೌಂಡು ಪೆಟ್ರೋಲಿನ ಶಕ್ತಿಯುಳ್ಳದ್ದಾಗಿರುತ್ತದೆ.

### ಹಿಟ್ಲರ್ ಮಜ್ಜೆ ಹುಟ್ಟಾನು !

ಈಗ ಕೆನಡಾದಲ್ಲಿರುವ ಪ್ರಸಿದ್ಧ ಚೈನಾ ತತ್ವಜ್ಞಾನಿ ಮತ್ತು ಲೇಖಕ ಡಾ| ಲಿಂ ಯು ಟಾಂಗ್ " ವಿಕಾಡೋ ಚಕ್ರವರ್ತಿಯನ್ನು ಒಬ್ಬ ಬಟ್ಲರ್ ಸ್ಥಿತಿಗಿಳಿಸಬೇಕೆಂದೂ, ಆತನು ಮಿತ್ರ ಸೇನಾನಿಗೆ ಸೀರು ಕೊಡುವುದು, ಸಿಗರೇಟನ್ನು ಹತ್ತಿಸುವುದು ಮುಂತಾದ ಕೆಲಸಗಳನ್ನು ಮಾಡಬೇಕೆಂದೂ " ತಿಳಿಸಿರುವನು. ಮಿತ್ರರು ಜಪಾನರನ್ನು ಸರಿಯಾದ ಹತೋಟಿಯಲ್ಲಿಡದಿದ್ದರೆ, ೧೦ ವರ್ಷಗಳಲ್ಲಿ ಒಬ್ಬ ಜಪಾನಿ ಹಿಟ್ಲರ್ ಹೊರಬೀಳುವುದಾಗಿಯೂ ಹೇಳಿರುವರು.

### ಕಪ್ಪ ಪೂಜಾರಿಗೆ ಕತ್ತೆ ಪೂಜೆ !

ಒವಾಹರಲಾಲರ ವಿಚಾರಣೆ ನಡೆದ ಸ್ಥಳವೆಂದು ಒಮ್ಮೆ ಪ್ರಸಿದ್ಧಿಗೆ ಬಂದಿದ್ದ ಗೋರಖಪುರ ಜಿಲ್ಲೆಯಿಂದ ಬಂದ ಬಿಸಿಬಿಸಿ ಸುದ್ದಿಯಿದು. ಗೋಗ್ರಾ ನದಿ ಗೋರಖ್‌ಪುರ ಜಿಲ್ಲೆಯಲ್ಲಿ ಹರಿಯುತ್ತದೆ. ಆ ನದಿಯ ಉತ್ತರ ದಂಡೆಯಲ್ಲಿ ಬ್ರಹಲ್‌ಗಂಜ್ ಎಂಬ ಚಿಕ್ಕ ಹಳ್ಳಿಯಿದೆ. ಅಲ್ಲಿಯ ಒಂದು ದೇವಸ್ಥಾನದ ಪೂಜೆ ಮಾಡುತ್ತಿದ್ದ ಪೂಜಾರಿಯು ಮೂರ್ತಿಯ ಮೇಲಿದ್ದ ಒಡವೆಗಳನ್ನು ಕದ್ದನೆಂಬ ಆರೋಪದ ಮೇಲೆ ಆ ಹಳ್ಳಿಯವರು, ಮುಖದ ಒಂದು ಪಾರ್ಶ್ವಕ್ಕೆ ಮಸಿ ಹಚ್ಚಿ, ಒಂದು ಕತ್ತೆಯ ಮೇಲೆ ಕುಳ್ಳಿರಿಸಿ ಊರೆಲ್ಲಾ ಮೆರವಣಿಗೆ ಮಾಡಿಸಿದರು. ಅನಂತರ ಪೂಜಾರಿಯನ್ನು ನದಿಯ ಆಚೆಯ ದಡಕ್ಕೆ ಕೊಂಡೊಯ್ದು, " ಇನ್ನು ಮುಂದೆ ನಮ್ಮ ಹಳ್ಳಿಯಲ್ಲಿ ಕಾಲಿಡಬೇಡಿ ಭಟ್ಟರೇ " ಎಂದು ಎಚ್ಚರಿಕೆ ಕೊಟ್ಟು, ಅವನನ್ನು ಗಡಿಪಾರು ಮಾಡಿಬಿಟ್ಟರು. ಇದೇ ಪೂಜಾರಿ ಹಿಂದೆ ಹಲವು ದೇವಸ್ಥಾನಗಳಲ್ಲಿ ಇದೇ ರೀತಿಯ ಚೋರವೃತ್ತಿ ನಡೆಸಿರುವನಂತೆ. ದೋಷವಿಷ್ಟೆ: ದೇವರಿಗಿಂತ ದೇವರ ಭಂಗಾರದ ಮೇಲೆ ಅಧಿಕ ಪ್ರೇಮವು ! (ಪ್ರ)

ಂ ಂ

### ಅಹಿಂಸೆಯ ಆದರ್ಶ

ಪಾಟ್ನಾದಲ್ಲಿ ಇದೇ ತಿಂಗಳಲ್ಲಿ ' ರೆಡಿಕಲ್ ಪಕ್ಷ ' ಹಾಗೂ ' ಕೂಲಿಗಾರರ ಸಂಘ ' ದವರು ಬಿಲ್ಲೆಯೊಳಗಿನ ಎಲ್ಲ ಕೂಲಿಗಾರರ ಪರಿಷತ್ತನ್ನು ನೆರೆಸಿದ್ದರು. ಸಾವಿರಾರು ಬಡ ಕೂಲಿಗಾರರು ನೆರೆದಿದ್ದರು. ಸಭಾ ಮಂಟಪದಲ್ಲಿ ಎಲ್ಲರಿಗೂ ಸ್ಥಾನ ಸಾಕಾಗುತ್ತಿಲ್ಲವಾದ್ದರಿಂದ ಕೆಲವರು ಹೊರಗೂ ನಿಂತಿದ್ದರು. ರೆಡಿಕಲರ ಈ ಪ್ರಚಂಡ ಸಭೆಯನ್ನು ಕಂಡು ಪಾಟ್ನಾದ ಬಿಳೇ ಟೊಪ್ಪಿಯ ೩೦-೪೦ ಕಾಂಗ್ರೆಸಿಗರು ' ಎಂ. ಎಚ್. ರಾಯ್ ಲಯವಾಗಲೀ, ಗಾಂಧೀಜೀಯವರ ಜಯವಾಗಲೀ ' ಎಂದು ಒದರುತ್ತ ಬಲತ್ಕಾರದಿಂದ ಒಳಗೆ ಪ್ರವೇಶಿಸಲು ಯತ್ನಿಸಿದರು. ಆಗದಿರಲು, ಅಹಿಂಸೆಯ ಉಪಾಸಕರು ಹೊಡೆದಾಟವನ್ನು ಆರಂಭಿಸಿದರು. ಆದರೆ ಹೊರಗಿನ ಜನರು ವಿರೋಧಿಸಿದ್ದರಿಂದಲೂ, ಕೂಲಿಕಾರ ಸ್ವಯಂಸೇವಕರು ಅಲ್ಲಿಧಾವಿಸಿ ಬಂದುದರಿಂದಲೂ ಬಿಳೇ ಟೊಪ್ಪಿಗೆಯವರು ಕಾಲಿಗೆ ಬುದ್ಧಿ ಹೇಳಿದರು. ಕಾಂಗ್ರೆಸಿಗರ ಇಂಥ ಕೃತ್ಯಗಳಿಗೆ ಬಿಹಾರಿನ ಹಿಂದಿನ ಮಂತ್ರಿಗಳಾದ ಕೃಷ್ಣಸಿಂಹರ ಸಮರ್ಥನೆಯಿದೆ.

(ಬಿ)

## ವಾರ್ತಾತರಂಗ

ಮಹಾತ್ಮ ಗಾಂಧೀಜೀಯವರು ಮುದ್ರಾಸಿಗೆ ಭೇಟಿಯಿತ್ತು, ಅನಂತರ ದಕ್ಷಿಣ ಭಾರತ ಪ್ರವಾಸವನ್ನು ಕೈಗೊಳ್ಳುವರೆಂದು ತಿಳಿದುಬಂದಿದೆ. ಈ ಪ್ರವಾಸ ಕಾಲದಲ್ಲಿ ಮಹಾತ್ಮ ಗಾಂಧೀಜೀಯವರು ಮೈಸೂರಿಗೂ ಭೇಟಿ ಕೊಡಲಿರುವರೆಂದು ತಿಳಿದುಬಂದಿದೆ.

ಂ ಂ

ಯುದ್ಧವು ಮುಕ್ತಾಯವಾದುದರಿಂದ, ಭಾರತ ಸ್ವಾತಂತ್ರ್ಯದ ಸ್ಥಿರವಾದ ಮತ್ತು ಕಟ್ಟಕಡೆ ವ್ಯವಸ್ಥೆ ನಡೆಯಬೇಕೆಂದೂ ಈ ರೀತಿಯಾಗಬೇಕಾದರೆ ಇತರ ಸ್ವತಂತ್ರ ರಾಜ್ಯಗಳೊಡನೆ ಅದು ಸಹಸಹಕರಿಸಲು ಸ್ವಾತಂತ್ರ್ಯ ಭಾರತಕ್ಕೆ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದೂ ಪ್ರೆ| ಆಜಾದ್ ಅಮೆರಿಕೆಗೆ ಹೇಳಿದರು.

ಂ ಂ

ಇಂದುಮತಿ ಗಾನಾಜಿ ಮತ್ತು ಟೆಂಡಲ್ಕರರ ವಿವಾಹದಲ್ಲಿ ಮಹಾತ್ಮ ಗಾಂಧೀಜೀ ಹಾಜರಿದ್ದು ತಾವೇ ನೂಲಿದಾರದಿಂದ ತಯಾರಿಸಿದ ಹಾರಗಳನ್ನು ವಧೂವರರಿಗೆ ಹಾಕಿದರು. ಈ ವಿವಾಹದಲ್ಲಿ ಪೌರೋಹಿತ್ಯವನ್ನು ನಡೆಸಿದವನು ಒಬ್ಬ ಹರಿಜನರವನು.

ಂ ಂ

ಬೆಂಗಳೂರು ಆ 21— ಸಂಸ್ಥಾನದಲ್ಲಿ ಲಂಚಭ್ರಷ್ಟತ್ವಗಳನ್ನು ನಿರ್ಮೂಲಿಸುವುದಕ್ಕಾಗಿ ಸರಕಾರದವರು ಸರ್ ಎ. ಆರ್. ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿರುವರು.

ಂ ಂ

ಪ್ರಮುಖ ನಾಜೀ ಯುದ್ಧ ತಜ್ಞೀರುದಾರರ ವಿಚಾರಣೆ ಏರ್ಪಾಡನ್ನು ಪರೀಕ್ಷಿಸಲು ಅಮೇರಿಕಾ, ರಷ್ಯಾ, ಇಂಗ್ಲೆಂಡ್ ಫ್ರಾನ್ಸ್ ಪ್ರತಿನಿಧಿಗಳು ನೂರೆಂಬರ್ಗಿಗೆ ಪ್ರಯಾಣ ಮಾಡಿದರು.

ಂ ಂ

ಬರ್ಲಿನ್ ನಿವಾಸಿಗಳು ತಮ್ಮಲ್ಲಿರುವ ನಗನಾಣ್ಯಗಳನ್ನೆಲ್ಲಾ ಮಿತ್ರ ಸೇನಾಧಿಕಾರಿಗೆ ೧೦ ದಿವಸದೊಳಗಾಗಿ ಒಪ್ಪಿಸಬೇಕೆಂದು ಆಜ್ಞೆ ಹೊರಟಿದೆ.

ಂ ಂ

ಕಾಂಗ್ರೆಸ್, ಲೀಗ್, ಮತ್ತು ಸರಕಾರ ಇವು ಮೂರನ್ನೂ ಎದುರಿಸಿ ಚುನಾವಣೆಯಲ್ಲಿ ಹೋರಾಡಲು ಹಿಂದೂ ಮಹಾಸಭೆಯು ಒಂದು ಕೋಟಿ ರೂಪಾಯಿಗಳ ನಿಧಿಯನ್ನು ಸಂಚಯಿಸಲು ನಿಶ್ಚಯಿಸಿರುವುದಾಗಿ ಡಾ| ಶ್ಯಾಮಪ್ರಸಾದ ಮುಖರ್ಜಿ ಹೇಳಿರುವುದಾಗಿ ಒಂದು ಹೋರ್ ವಾರ್ತೆಯೊಂದು ತಿಳಿಸಿದೆ.

AT Opera___ From 22-8-45

# BROTHERHOOD

.... ಅಪೇರಾ ಟಾಕೀಸ್‌ನಲ್ಲಿ ....

ಭಾರತಭೂಷಣ, ರಾಯ್‌ಮೋಹನ್, ಮಹಮದ್ ಹಾದಿ,
ಸುನಿತ್ರ, ಜಿನ್ ಪಾಲ್ ಪಾತ್ರವಹಿಸಿರುವ

## ಭಾಯ್‌ಚಾರ

(ಉರ್ದು)

For Good Printing
**L. N. Press**
Sriramp et MYSORE

Edited, Printed and published by M. S. Krishna Rao, at the Satvavadi Press, Chamareja Agrahar, Mysore

ರಕ್ತ ವೃದ್ಧಿಗೆ — ಧಾತುಪುಷ್ಟಿಗೆ

## ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಲೇಡಿ ಪಾರ್ಟಿಬೇ ಮಂಡಳಿ ಪ್ರವಾಸ

## ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸ್ಕಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಟ್ಟು ಒಂದೂ ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫೌಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾಗಿದೆ. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

**ವಲ್ಲಭದಾಸ್ ತೇಜ್‌ಪಾಲ್,**
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.


## 2 ನೇ ವಾರ

**At Ranjit**

# DUKH-SUKH

ರಣಜಿತ್ ಟಾಕೀಸಿನಲ್ಲಿ

ಸಿತಾರ — ರಾಮಕುಕ್ಲ — ವಾಸಂತಿ
ಪಾತ್ರವಹಿಸಿರುವ

## ದುಖ್-ಸುಖ್


## ಸತ್ಯವಾದಿ

**ದಿನ ಪತ್ರಿಕೆ**

ಸ್ಥಳದಲ್ಲಿ — ತಿಂಗಳಿಗೆ 6 ಆಣೆ
ಕೂಡಲೇ ಚಂದಾದಾರರಾಗಿ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ ಮೈಸೂರು


ವಾಷಿಂಗ್ಟನ್ ಆ 21 — ಅಮೇರಿಕದ ಲೆಂಡ್ ಲೀಸ್ ಕಾರ್ಯಕ್ರಮ ಮುಂದೆ ಸಿಲ್ಲಿಸಲಾಗುವುದೆಂದೂ, ಸಹಾಯ ಬೇಕಾದ ಮಿತ್ರರು ರಪ್ಪು ಅವದು ಬೇಂಕಿನಲ್ಲಿ ಸಾಲ ಪಡೆಯ ಬಹುದೆಂದು ಪ್ರಕಟವಾಗಿದೆ.

ವಾಷಿಂಗ್ಟನ್ ಆ 21 — ಈ ವಷದ ಅಂತ್ಯದಲ್ಲಿ ನಾಗರೀಕರ ಉಪಯೋಗಕ್ಕಾಗಿ 3500000 ಹೊಸ ರೇಡಿಯೋ ಸೆಟ್ಟುಗಳು ತಯಾರಾಗುವುದೆಂದು ಹೇಳಲಾಗಿದೆ.

ಮಾಸ್ಕೊ ಆ 53— ಮಂಚೂರಿಯ ವನ್ನೆಲ್ಲಾ ರಷ್ಯನರು ಆಕ್ರಮಿಸಿದರು.

ಪೂನಾ ಆ 22— ಈ ದಿನ ನಡೆದ ಕುದುರೆ ಜೂಜಿನಲ್ಲಿ ಒಂದು ಟ್ರಿಓಲ್ ಟೋಟಕ್ಕೆ ರೂ. 27130 ದೊರೆತಿದೆ.

ಲಂಡನ್ ಆ 22— ಚರ್ಚಿಲ್ಲರು ಅಮೆರಿಕಾದಲ್ಲಿ ಲಕ್ಚರ್ ಟೂರನ್ನು ನಡೆಸಿದರೆ ಕನಿಷ್ಟಪಕ್ಷ 187 ಸಾವಿರ ಪೌಂಡುಗಳನ್ನಾದರೂ ಕೊಡುವುದಾಗಿ ಒಂದು ಆಹ್ವಾನ ಬಂದಿದೆ.

ನ್ಯೂಯಾರ್ಕ್ ಆ 21 — ಅಮೇರಿಕದ ೩ ಮುಖ್ಯ ವಿಮಾನ ಕಂಪೆನಿಗಳು ಪ್ರಯಾಣೀಕರ ದರವನ್ನು ಎರಡು ಕಾಲಾಣೆಯಂತೆ ಇಳಿಸಿದೆ. (೧ ಮೈಲಿಗೆ)